

# ಮಾಂಡೆವಿಲ್ಲಾ



■ ಚಿತ್ರ– ಬರಹ: **ಅಂಜಲಿ ಕೆ.ಬಿ.**

**ಈ** ಹೂವಿನ ಹೆಸರು ಮಾಂಡೆವಿಲ್ಲಾ. ಮೂಲತಃ ದಕ್ಷಿಣ ಅಮೆರಿಕಾದಿಂದ ಬಂದಿದೆ. ಇದು ಅಪೋಸೈನೇಸಿಯೆ ಜಾತಿಗೆ ಸೇರಿದ್ದು, ವೈಜ್ಞಾನಿಕ ಹೆಸರು ಮಾಂಡೆವಿಲ್ಲಾ ಸಾಂಡೆರಿ/ಡಿಪ್ಲಡೇನಿಯಾ ಸಾಂಡೆರಿ ಎಂದಾಗಿದೆ. ಸಾಮಾನ್ಯವಾಗಿ ರಾಕ್ ಟ್ರಂಪೆಟ್ ಫ್ಲವರ್ ಎಂದು ಆಂಗ್ಲಭಾಷೆಯಲ್ಲಿ ಕರೆಯುತ್ತಾರೆ.

ಹೂಗಳು ಬಹಳ ಆಕರ್ಷಕವಾಗಿದ್ದು ವೈವಿಧ್ಯಮಯ ಪ್ರಬೇಧಗಳು ಕಾಣಸಿಗುತ್ತವೆ. ಬಳ್ಳಿಗಳು ಮತ್ತು ಪೊದರು ರೂಪದ ಸಸ್ಯಗಳು ಸಾಮಾನ್ಯವಾಗಿ ಎಲ್ಲಾ ನರ್ಸರಿಗಳಲ್ಲಿ ಸಿಗುತ್ತವೆ. ಕಂಪ್ಯೂಟರ್ ಯುಗದಲ್ಲಿ ಅಂತರ್ಜಾಲದ ಸಹಾಯದಿಂದಲೂ ಇದನ್ನು ಕೊಳ್ಳಬಹುದು.

ಕೆಂಪು, ಗುಲಾಬಿ, ಬಿಳಿ ಮತ್ತು ಹಳದಿ ಬಣ್ಣದ ಹೂಗಳು ಚಿರಪರಿಚಿತವಾಗಿದ್ದು, ಹೂಕುಂಡಗಳಲ್ಲಿ, ತೂಗುಕುಂಡಗಳಲ್ಲಿ, ತಾರಸಿ ತೋಟಗಳಲ್ಲಿ ವಿಂಡೋ ಬಾಕ್ಸ್‌ಗಳಲ್ಲಿ ಮತ್ತು ಬೇಲಿಗಳಲ್ಲಿ ಬೆಳೆಸಬಹುದು.

ಬೆಳೆಸಲು ಹೆಚ್ಚೇನೂ ಶ್ರಮದ ಅಗತ್ಯವಿಲ್ಲ. ಬಿಸಿಲು ಚೆನ್ನಾಗಿದ್ದು, ಶೇಕಡಾ 25 ಪ್ರಮಾಣದ ನೆರಳು ದೊರೆತರೆ ಒಳ್ಳೆಯ ಗುಣಮಟ್ಟದ ಹೂಗಳನ್ನು ನಿರೀಕ್ಷಿಸಬಹುದು. ಮಳೆಗಾಲ ಬಿಟ್ಟು ಉಳಿದೆಲ್ಲಾ ಕಾಲಗಳಲ್ಲಿ ಈ ಗಿಡ ಹೂಗಳನ್ನು ಬಿಡುತ್ತದೆ.

ಕೆಲವೊಮ್ಮೆ ಜೇಡ ಮತ್ತು ಹಿಟ್ಟುತಿಗಣೆ ಈ ಸಸ್ಯಕ್ಕೆ ಹಾನಿ ಮಾಡುತ್ತವೆ.